ಮಣಪ್ಪುರಂ ಫೈನಾನ್ಸ್ ಲಿಮಿಟೆಡ್
Make Life Easy

# ನಿಷ್ಪಕ್ಷಪಾತ ವ್ಯವಹಾರ ಪದ್ಧತಿಯ ನಿಯಮಾವಳಿಗಳು (FAIR PRACTICE CODE)

MANAPPURAM FINANCE LIMITED
Make Life Easy

## A) *ಪ್ರಸ್ತಾವನೆ/ಪೀಠಿಕೆ*

ಭಾರತೀಯ ರಿಸರ್ವ್ ಬ್ಯಾಂಕಿನವರು ಹೊರಡಿಸಿದ "ಎನ್.ಬಿ.ಎಫ್.ಸಿ.ಗಳಿಗೆ ನಿಷ್ಪಕ್ಷಪಾತದ ವ್ಯವಹಾರ ಪದ್ಧತಿಗಳ ನಿಯಮಾವಳಿಗಳ ನಿರ್ದೇಶನಗಳು" ಎಂದು ಶೀರ್ಷಿಕೆಯುಳ್ಳ ದಿನಾಂಕ: 26 ಮಾರ್ಚ್ 2012 ರ ಸುತ್ತೋಲೆ ಸಂಖ್ಯೆ DNBSCCPD No. 266/03.10.01/2011-12 ರ ಪ್ರತಿಕ್ರಿಯೆಯಾಗಿ ನಿಷ್ಪಕ್ಷಪಾತಯದ ವ್ಯವಹಾರ ಪದ್ಧತಿಯ ನಿಯಮಾವಳಿಗಳನ್ನು ಮಣಪ್ಪುರಂ ಫೈನಾನ್ಸ್ ಲಿಮಿಟೆಡ್ (ಕಂಪನಿ) ಸಂಯೋಜಿಸಿದ್ದು, ಅದು ಕಂಪನಿಯ ವೆಬ್ ಸೈಟ್‌ನಲ್ಲಿ ಈಗಿರುವ ನಿಯಮಾವಳಿಗಳನ್ನು ಬದಲಾಗಿಸುತ್ತಿದೆ.

ನಿಷ್ಪಕ್ಷಪಾತ ವ್ಯವಹಾರ ಪದ್ಧತಿಯ ನಿಯಮಾವಳಿಗಳು ಕಂಪನಿಯ ಮುಖ್ಯ ಕಛೇರಿ, ವಲಪಾಡ, ತ್ರಿಶೂರ್, ಕೇರಳ, ಹಲವಾರು ಕೇಂದ್ರಗಳಲ್ಲಿರುವ ಪ್ರಾದೇಶಿಕ ಕಛೇರಿಗಳು ಮತ್ತು ಭಾರತದಾದ್ಯಂತ ಇರುವ ಶಾಖೆಗಳನ್ನು ಒಳಗೊಂಡು ಕಂಪನಿಯ ಎಲ್ಲಾ ಕಛೇರಿಗಳಿಗೂ ಅನ್ವಯಿಸುತ್ತದೆ. ನಿಷ್ಪಕ್ಷಪಾತ ವ್ಯವಹಾರ ಪದ್ಧತಿಯ ನಿಯಮಾವಳಿಗಳಂತೆ ಕಂಪನಿಯ ಎಲ್ಲಾ ಉದ್ಯೋಗಿಗಳು ಮತ್ತು ಅಧಿಕಾರಿಗಳು ಬದ್ಧರಾಗಿರುತ್ತಾರೆ.

## B) *ಉದ್ದೇಶಗಳು*

ನಿಷ್ಪಕ್ಷಪಾತ ವ್ಯವಹಾರ ಪದ್ಧತಿಯ ನಿಯಮಾವಳಿಗಳ ಉದ್ದೇಶಗಳು ಈ ಕೆಳಗಿನಂತಿವೆ

i) ಗ್ರಾಹಕರೊಡನೆ ವ್ಯವಹರಿಸಲು ಉತ್ತಮ ವ್ಯವಹಾರ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು.

ii) ಗ್ರಾಹಕರ ಸಂತೃಪ್ತಿಯನ್ನು ನಿಶ್ಚಿತಪಡಿಸಿಕೊಳ್ಳಲು ಹೆಚ್ಚಿನ ಸಾಧನೆಯ ಗುರಿಯನ್ನು ಇಟ್ಟುಕೊಳ್ಳುವದು ಮತ್ತು ಉನ್ನತ ಕಾರ್ಯತಂತ್ರಗಳನ್ನು ಸಾಧಿಸಲು ಪ್ರಯತ್ನಿಸುವುದು.

iii) ವ್ಯವಹಾರಗಳನ್ನು ನಡೆಸುವಾಗ, ಪಾರದರ್ಶಕ, ನಿಷ್ಪಕ್ಷಪಾತ, ನೈತಿಕ ಮತ್ತು ಕಾನೂನು ಬದ್ಧವಾದ ವ್ಯವಹಾರ ಪದ್ಧತಿಗಳನ್ನು ಅನುಸರಿಸುವದು.

iv) ಗ್ರಾಹಕರಿಗೆ/ಗ್ರಾಹಕರಾಗಬಹುದಾದವರಿಗೆ ಅವಶ್ಯಕವಾದ ಎಲ್ಲಾ ಮಾಹಿತಿಯನ್ನು ಮತ್ತು ಹಣ ತುಂಬುವ ಬಗ್ಗೆ ಮಾಹಿತಿ ಒದಗಿಸುವುದು ಹಾಗೂ ಪರಸ್ಪರ ಉಪಯೋಗವಾಗುವಂತಹ ನಿರಂತರ ಸಂಬಂಧವನ್ನು ಪ್ರೋತ್ಸಾಹಿಸುವುದು.

v) ತೃಪ್ತಿ ಹೊಂದಿದ ಗ್ರಾಹಕರ, ನಿರಂತರವಾಗಿ ಬೆಳೆಯುತ್ತಿರುವ ತಳಹದಿಗೆ ಅನುಕೂಲ ಮಾಡಿಕೊಡುವುದರೊಂದಿಗೆ ಸಂಶಯಾಸ್ಪದ ಚಾರಿತ್ರ್ಯದ ಅಥವಾ ಅಪರಾಧಿಕ ಹಿನ್ನೆಲೆಯುಳ್ಳ ಗ್ರಾಹಕರಿಂದ ಕಟ್ಟುನಿಟ್ಟಾಗಿ ದೂರವಿರುವದು.

## C) *ಘೋಷಣೆಗಳು ಮತ್ತು ವಚನಬದ್ಧತೆಗಳು*

i) ಕಂಪನಿಗೆ ನಿಯಂತ್ರಕರಿಂದ (ಭಾರತೀಯ ರಿಸರ್ವ್ ಬ್ಯಾಂಕ್, ಎಸ್.ಇ.ಬಿ.ಐ., ಐ.ಆರ್.ಡಿ.ಎ. ಮುಂತಾದವುಗಳು) ಮತ್ತು ಸರಕಾರ, ಸ್ಥಳೀಯ ಪ್ರಾಧಿಕಾರ ಇತ್ಯಾದಿಗಳಂತಹ ಸಕ್ಷಮ ಪ್ರಾಧಿಕಾರಗಳಿಂದ ಮಾಡಿದ/ಹೊರಡಿಸಿದ, ಅನ್ವಯವಾಗುವ ಎಲ್ಲಾ ಕಾನೂನುಗಳನ್ನು, ನಿಯಮಗಳನ್ನು ಮತ್ತು ನಿರ್ದೇಶನಗಳನ್ನು ಪಾಲಿಸಲು ಕಂಪನಿಯು ಬದ್ಧವಾಗಿದೆ.

ii) ಕಂಪನಿಯು ತನ್ನ ಎಲ್ಲಾ ಕಛೇರಿಗಳಲ್ಲಿ ಗ್ರಾಹಕರ ಸಂಪೂರ್ಣ ತೃಪ್ತಿಗಾಗಿ ದಕ್ಷ, ವೃತ್ತಿಪರ ಮತ್ತು ಸಭ್ಯತೆಯ ಸೇವೆಗಳನ್ನು ಅಳವಡಿಸಿಕೊಳ್ಳಲು ವಚನಬದ್ಧವಾಗಿರುತ್ತದೆ.

iii) ಕಂಪನಿಯು ಆಂತರಿಕವಾಗಿ ನಿರ್ಧಿಷ್ಟಪಡಿಸಿದ ಸಾಧನೆಯ ಗುರಿ ಮತ್ತು ವ್ಯವಹಾರ ಪದ್ಧತಿಗಳನ್ನು ಜಾರಿಗೊಳಿಸಲು ಮತ್ತು ಸುಧಾರಿಸಲು ನಿರಂತರವಾಗಿ ಪ್ರಯತ್ನಿಸುವುದು ಹಾಗೂ ಉದ್ದಿಮೆಯಲ್ಲಿ ಪ್ರಚಲಿತವಾಗಿರುವ ಮಾನದಂಡಗಳನ್ನು ಮೀರಿ ಮುಂದಿರುವುದು.

IV) ಧರ್ಮ, ಜಾತಿ, ಲಿಂಗ ಅಥವಾ ಭಾಷೆಗಳ ಆಧಾರದ ಮೇಲೆ ಗ್ರಾಹಕರನ್ನು ಬೇಧ ಮಾಡದಿರಲು ಕಂಪನಿಯು ಬದ್ಧವಾಗಿರುತ್ತದೆ.

V ಕಂಪನಿಯು ಗ್ರಾಹಕರಿಗೆ/ಭಾವಿ ಗ್ರಾಹಕರಿಗೆ ತನ್ನ ಯೋಜನೆಗಳ ಮತ್ತು ಸೇವೆಗಳ ಬಗ್ಗೆ ಸ್ಪಷ್ಟ ಹಾಗೂ ಪೂರ್ತಿ ಮಾಹಿತಿಯನ್ನು ನೀಡುವುದು ಮತ್ತು ತಪ್ಪು ಅಭಿಪ್ರಾಯ ಕೊಡುವಂತಹ ಅಥವಾ ತಪ್ಪುದಾರಿಗೆ ಎಳೆಯುವ ಸಾಮರ್ಥ್ಯವುಳ್ಳ ಜಾಹೀರಾತುಗಳನ್ನು ಅಥವಾ ಪ್ರಕಟಣೆಗಳನ್ನು ಮಾಡದಿರುವುದು.

VI) ಗೌಪ್ಯ ಶುಲ್ಕಗಳ ಅಥವಾ ಪಾರದರ್ಶಕತೆ ಕೊರತೆಯ ಅಂಶಗಳಿರುವ ಯಾವುದೇ ಸಾಧನ ಅಥವಾ ಸೇವೆಗಳನ್ನು ಪರಿಚಯಿಸುವುದರಿಂದ ದೂರವಿರಲು ಕಂಪನಿಯು ಬದ್ಧವಾಗಿರುತ್ತದೆ.

VII) ಗ್ರಾಹಕರು ಅಡವಿಟ್ಟು ಬಂಗಾರದ ಸುರಕ್ಷತೆಗಾಗಿ ಎಲ್ಲಾ ಸಂಭವವಿರುವ ಮತ್ತು ಯುಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಮತ್ತು ಹತೋಟಿಯಲ್ಲಿರುವ ಭದ್ರತೆಯು ಯಾವುದೇ ಆಕಸ್ಮಿಕ, ಉದ್ದೇಶರಹಿತ ಅಥವಾ ವಂಚನೆಯಿಂದ ಕಳೆದುಹೋದಲ್ಲಿ ಗ್ರಾಹಕರಿಗೆ ಪರಿಹಾರ ನೀಡಲು ಕಂಪನಿಯು ಬದ್ಧವಾಗಿರುತ್ತದೆ.

viii) ಕಂಪನಿಯು ಗ್ರಾಹಕರೊಂದಿಗೆ ಸ್ಥಳೀಯ ಭಾಷೆಯಲ್ಲಿ ಮತ್ತು ಗ್ರಾಹಕರ ವಿನಂತಿಯ ಮೇರೆಗೆ ಇಂಗ್ಲೀಷ್‌ನಲ್ಲಿ ಸಂಪರ್ಕಿಸುತ್ತದೆ.

ix) ವ್ಯವಹಾರ ನಡೆಸುವಾಗ ಗ್ರಾಹಕರು ಮಾಡಿದ ಯಾವುದೇ ಉದ್ದೇಶರಹಿತ ಅಥವಾ ಲೆಕ್ಕಪತ್ರಗಳಲ್ಲಿಯ ತಪ್ಪುಗಳ ಅನುಚಿತ ಪ್ರಯೋಜನ ಪಡೆಯದಿರಲು ಕಂಪನಿಯು ಬದ್ಧವಾಗಿರುತ್ತದೆ.

x) ಗ್ರಾಹಕರ ದೂರುಗಳನ್ನು ಮತ್ತು ಸಲಹೆಗಳನ್ನು ಸರಿಯಾದ ಸಮಯದಲ್ಲಿ ಬಗೆಹರಿಸಲು ಒಂದು ವ್ಯವಸ್ಥೆಯನ್ನು, ತನ್ನೊಳಗೆ ಹೆಚ್ಚಾಗುವ ದೂರುಗಳ ಪರಿಹಾರ ವ್ಯವಸ್ಥೆಯೊಂದಿಗೆ ಮಾಡಲು ಕಂಪನಿಯು ವಚನಬದ್ಧವಾಗಿದೆ.

xi) ಕಂಪನಿಯು ತನ್ನ ಅಂತರ್ಜಾಲದಲ್ಲಿ ನಿಷ್ಪಕ್ಷಪಾತ ವ್ಯವಹಾರ ಪದ್ಧತಿಗಳ ನಿಯಮಾವಳಿಗಳನ್ನು ಪ್ರದರ್ಶಿಸುವುದು ಮತ್ತು ಗ್ರಾಹಕರ ವಿನಂತಿ ಮೇರೆಗೆ ಒಂದು ಪ್ರತಿಯನ್ನು ಒದಗಿಸುವುದು.

## D) *ನಿಷ್ಪಕ್ಷಪಾತ ವ್ಯವಹಾರ ಪದ್ಧತಿ*

### I) **ಸಾಲಗಳು, ಷರತ್ತುಗಳು ಮತ್ತು ನಿಬಂಧನೆಗಳು, ಬಡ್ಡಿದರ ಮತ್ತು ಶುಲ್ಕಗಳು**

i) ಕಂಪನಿಯು ಸಾಲದ ಅರ್ಜಿ ನಮೂನೆಗಳನ್ನು, ಅದರೊಂದಿಗೆ ಹಾಜರುಪಡಿಸಬೇಕಾದ ದಾಖಲೆಗಳನ್ನೂ ಸಹ ನಮೂದಿಸಿ ಗ್ರಾಹಕರಾಗಬಹುದಾದವರಿಗೆ, ಸ್ಥಳೀಯ ಭಾಷೆಯಲ್ಲಿ ಉಚಿತವಾಗಿ ಸಂಬಂಧಿಸಿದ ಶಾಖೆಯಲ್ಲಿ ಒದಗಿಸುವದು. ಎಲ್ಲಾ ಸಂದರ್ಭಗಳಲ್ಲಿ ಸರಿಯಾಗಿ ಪೂರ್ತಿ ಮಾಡಿದ ಅರ್ಜಿ ನಮೂನೆಯನ್ನು ಪಡೆದುಕೊಂಡಿರುವುದಾಗಿ ಸ್ವೀಕೃತಿಯನ್ನು ಗ್ರಾಹಕರಿಗೆ ನೀಡಲಾಗುವುದು. ಕಾರ್ಯನೀತಿ ಹಾಗೂ ಗ್ರಾಹಕ ಸೇವೆಯ ವಿಷಯವಾಗಿ ಸಾಲದ ಅರ್ಜಿಗಳನ್ನು ತಕ್ಷಣ, ಮಂಜೂರು/ತಿರಸ್ಕಾರ ಮಾಡಲಾಗುವುದು. ಸಾಲದ ಹಣ ಕೊಡುವುದು ಮತ್ತು ಭದ್ರತೆಯ ಸ್ವೀಕೃತಿಯನ್ನು ಏಕಕಾಲಕ್ಕೆ ಮಾಡಲಾಗುವುದು.

II ಗ್ರಾಹಕರು /ಭಾವಿ ಗ್ರಾಹಕರು ತಿಳುವಳಿಕೆಯ ನಿರ್ಣಯವನ್ನು ತೆಗೆದುಕೊಳ್ಳುವಂತೆ ಮಾಡಲು ಸಾಲ / ಸಾಧನಕ್ಕೆ ಸಂಬಂಧಿಸಿದ ಅರ್ಹ ಸಾಲದ ಮೊತ್ತ, ಬಡ್ಡಿದರ, ಶುಲ್ಕಗಳು, ಕಾಲಮೀರಿದ ದಂಡದ ಬಡ್ಡಿ, ಬಡ್ಡಿಯನ್ನು ಲೆಕ್ಕ ಮಾಡುವ ವಿಧಾನ, ಬಡ್ಡಿಯ ಮೇಲೆ ವಿನಾಯಿತಿ ಮುಂತಾದ ಅವಶ್ಯಕ ಮಾಹಿತಿಯನ್ನು ಕಂಪನಿಯು ಬಹಿರಂಗಪಡಿಸುವುದು. ಸಾಲ ಮಂಜೂರಾತಿಗೂ ಮುನ್ನ, ವಿನಂತಿಸಿದರೆ, ವಿವರವಾದ ಷರತ್ತುಗಳು ಮತ್ತು ನಿಬಂಧನೆಗಳನ್ನು ಗ್ರಾಹಕರಿಗೆ/ಭಾವಿ ಗ್ರಾಹಕರಿಗೆ ಒದಗಿಸುವುದು.

III) ಸಾಲದ ಸೌಲಭ್ಯವನ್ನು ನಿಯಂತ್ರಿಸುವ ಎಲ್ಲಾ ಷರತ್ತುಗಳನ್ನು ಮತ್ತು ನಿಬಂಧನೆಗಳನ್ನೊಳಗೊಂಡ ಸ್ಥಳೀಯ ಭಾಷೆಯಲ್ಲಿ ಅಥವಾ ಗ್ರಾಹಕರು ಅರ್ಥ ಮಾಡಿಕೊಳ್ಳುವ ಭಾಷೆಯಲ್ಲಿರುವ ಸಾಲ ಮಂಜೂರಾತಿ ಪತ್ರ (ಪಾನ್ ಟಿಕೇಟ್)ವನ್ನು ಗ್ರಾಹಕರಿಗೆ ಕೊಡಲಾಗಿದೆ ಎಂದು ಕಂಪನಿಯು ಖಚಿತಪಡಿಸಿಕೊಳ್ಳುವುದು. ಸಾಲದ ಮಂಜೂರಾತಿ ಪತ್ರದಲ್ಲಿ (ಪಾನ್ ಟಿಕೇಟ್) ಸಾಲದ ಮೊತ್ತ ಸಾಲದ ಖಾತೆಯ ಸಂಖ್ಯೆ, ಬಡ್ಡಿದರ, ಶುಲ್ಕಗಳು, ಸಾಲದ ಪ್ರಕ್ರಿಯಾ ಶುಲ್ಕ ಮುಂತಾದವುಗಳನ್ನು ಒಳಗೊಂಡಿರುವುದು. ಕಂಪನಿಯ ಅಧಿಕೃತ ಅಧಿಕಾರಿಯ ಸಹಿಯನ್ನು ಹೊಂದಿರುವ ಸಾಲದ ಮಂಜೂರಾತಿ ಪತ್ರ (ಪಾನ್ ಟಿಕೇಟ್)ವು ಗ್ರಾಹಕರು ಶಾಖೆಯಲ್ಲಿ ಅಡವಿಟ್ಟ ಭದ್ರತೆಯ (ಬಂಗಾರ) ರಶೀದಿಯೂ ಸಹ ಆಗಿರುತ್ತದೆ.

iv) ಬಡ್ಡಿದರವನ್ನೊಳಗೊಂಡು, ಗ್ರಾಹಕರ ಮೇಲೆ ಆರ್ಥಿಕವಾಗಿ ಅಥವಾ ಬೇರೆ ರೀತಿಯಲ್ಲಿ ಪ್ರತಿಕೂಲ ಪರಿಣಾಮ ಬೀರಬಹುದಾದಂತಹ ಯಾವುದೇ ಬದಲಾವಣೆಗಳನ್ನು/ತಿದ್ದುಪಡಿಗಳನ್ನು, ಸಾಲದ ಷರತ್ತುಗಳಲ್ಲಿ ಮತ್ತು ನಿಬಂಧನೆಗಳಲ್ಲಿ ಸ್ವಾಭಾವಿಕ ನಡುವಳಕೆಯಲ್ಲಿ ಕಂಪನಿಯು ಮಾಡುವದಿಲ್ಲ. ಅಂತಹ ಬದಲಾವಣೆಗಳು/ತಿದ್ದುಪಡಿಗಳು ಅನಿವಾರ್ಯವಿರುವ ಅಸಹಜ ಸಂದರ್ಭಗಳಲ್ಲಿ, ಹೊಸ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು, ಅಂತಹ ಬದಲಾವಣೆ/ತಿದ್ದುಪಡಿಗಳ ಬಗ್ಗೆ ಗ್ರಾಹಕರಿಗೆ ಸಾಕಷ್ಟು ಸಮಯದ/ಸರಿಯಾದ ನೋಟಿಸನ್ನು ನೀಡುವುದು.

### II) **ವ್ಯಾಪಾರ ಮತ್ತು ಅಭಿವೃದ್ಧಿ**

i) ಕಂಪನಿಯು ದುರುದ್ದೇಶ/ಸ್ವಾರ್ಥಪೂರಿತ ಅಥವಾ ಗ್ರಾಹಕರ ಬೇಡಿಕೆಗೆ / ನಿರೀಕ್ಷೆಗೆ ಅಥವಾ ಗ್ರಾಹಕರು ಬಹಿರಂಗಪಡಿಸಿದ ನಿರೀಕ್ಷೆಗಳಿಗೆ ವಿರುದ್ಧವಾಗಿ ಯಾವುದೇ ಸಾಧನವನ್ನು ಉದ್ದೇಶಪೂರ್ವಕವಾಗಿ ಪ್ರೋತ್ಸಾಹಿಸುವುದಿಲ್ಲ. ಗ್ರಾಹಕರಿಗೆ/ಗ್ರಾಹಕರಾಗಬಹುದಾದವರಿಗೆ ತಪ್ಪು ತಿಳುವಳಿಕೆ ನೀಡಿ ಸಾಧನ ಮಾರಾಟ ಮಾಡುವುದನ್ನು ಹೊರತುಪಡಿಸಲು ಕಂಪನಿಯು ವ್ಯಾಪಾರದಲ್ಲಿ ಮತ್ತು ಕಾರ್ಯದಲ್ಲಿ ತೊಡಗಿರುವ ತನ್ನ ವ್ಯಕ್ತಿಗಳಿಗೆ ಸರಿಯಾದ ತರಬೇತಿ ಮತ್ತು ನಿರ್ದೇಶನಗಳನ್ನು ಕೊಡುವುದಾಗಿ ಖಚಿತಪಡಿಸಿಕೊಳ್ಳುತ್ತದೆ.

II ಕಂಪನಿಯು ಸಾಲದ ಮೇಲೆ ಹೆಚ್ಚಿನ ಬಡ್ಡಿದರವನ್ನು ವಿಧಿಸಿ ಅಥವಾ ಮಾರುಕಟ್ಟೆಯ ಪ್ರತಿಕೂಲ ಸ್ಥಿತಿಗಳ ಅನುಚಿತ ಪ್ರಯೋಜನ ಪಡೆದು ಲಾಭಗಳಿಸುವ ವಿಚಾರದಲ್ಲಿ ತೊಡಗುವುದಿಲ್ಲ. ಬಂಡವಾಳದ ವೆಚ್ಚ, ಅಪಾಯದ ಸಂಭಾವನೆ, ಸಾಲದ ಯೋಜನೆ, ಪ್ರತಿ ಗ್ರಾಮ್‌ಗೆ ಸಿಗುವ ಸಾಲ, ಲಾಭದ ಅಂತರ ಮುಂತಾದ ಹೆಚ್ಚು ಕಡಿಮೆಯಾಗುವ ವಿಷಯಗಳ ಮೇಲೆ ಬಡ್ಡಿದರವು ಆಧಾರಿತವಾಗಿರುತ್ತದೆ ಮತ್ತು ಈ ದರವು ಕಂಪನಿಯ ಬಡ್ಡಿದರದ ಕಾರ್ಯ ನೀತಿಯ ಹಾಗೂ ಕಾಲ ಕಾಲಕ್ಕೆ ಆಗುವ ನಿಯಂತ್ರಕರ ನಿರ್ದೇಶನಗಳ ಪ್ರಕಾರ ಇರುವುದಲ್ಲದೇ, ಉದ್ದಿಮೆಯಲ್ಲಿರುವ ವ್ಯವಹಾರ ಪದ್ಧತಿಗಳ ಮತ್ತು ಸಾದನೆಯ ಗುರಿಗಳ ಅನ್ವಯ ಇರುವುದು.

III) ಸಾಲದ ಯೋಜನೆ, ಬಡ್ಡಿದರ, ಪ್ರತಿ ಗ್ರಾಮ್‌ಗೆ ನೀಡುವ ಸಾಲ, ಶುಲ್ಕಗಳು ಮುಂತಾದವುಗಳ ಬಗ್ಗೆ ಪೂರ್ತಿ ಮತ್ತು ಸರಿಯಾದ ಮಾಹಿತಿಯನ್ನು ಕಂಪನಿಯ ಅಂತರ್ಜಾಲ ತಾಣದಲ್ಲಿ ಹಾಗೂ ಶಾಖೆಗಳಲ್ಲಿ ಪ್ರದರ್ಶಿಸಲಾಗುವುದು. ಕಾಲ ಕಾಲಕ್ಕೆ ಕಂಪನಿಯ ಆಡಳಿತ ಮಂಡಳಿಯು ತೆಗೆದುಕೊಳ್ಳುವ ನಿರ್ಧಾರಗಳ ಆಧಾರದ ಮೇಲೆ, ಮಾಧ್ಯಮ, ಬಿತ್ತಿ ಪತ್ರ, ಕೈಪಿಡಿ, ಸೂಚನಾ ಪತ್ರ, ಪ್ರದರ್ಶನ ಮುಂತಾದವುಗಳ ಮೂಲಕ ಪೂರ್ತಿ ಅಥವಾ ಆಯ್ದ ಮಾಹಿತಿಗಳನ್ನು ಒದಗಿಸಲಾಗುವುದು.

### III) **ಬಾಕಿ ವಸೂಲಿ, ಅಡವಿನ ಮೇಲಿನ ಹಕ್ಕಿನ ಚಲಾವಣೆ ಮತ್ತು ಭದ್ರತೆಯ ವಾಪಸಾತಿ**

i) ಕಂಪನಿಯ ಹಿತಾಸಕ್ತಿಗಳಿಗೆ ಪ್ರತಿಕೂಲ ಪರಿಣಾಮ ಬೀರುವ, ನಿರೀಕ್ಷಿಸದ ಅಥವಾ ಅಸ್ವಾಭಾವಿಕ ಸಂದರ್ಭಗಳನ್ನು ಹೊರತುಪಡಿಸಿ, ನ್ಯಾಯದ ವ್ಯವಹಾರದ ದೃಷ್ಟಿಯಿಂದ ಕಂಪನಿಯು ಮೊದಲೇ ಒಪ್ಪಿಕೊಂಡ ಅವಧಿಗೂ ಮುನ್ನ ಸಾಲವನ್ನು ಹಿಂದಕ್ಕೆ ಪಡೆಯವುದಿಲ್ಲ. ಉದಾ: ಭದ್ರತೆಯ ಮೌಲ್ಯವು ತುಂಬಾ ಕಡಿಮೆಯಾದಾಗ, ಬಂಗಾರವು ಪಡೆಯಲು ಯೋಗ್ಯವಲ್ಲದ್ದೆಂದು ಕಂಡುಬಂದಲ್ಲಿ, ನಿಯಂತ್ರಕರ /ಸರಕಾರದ ನಿರ್ದೇಶನ ಮುಂತಾದವುಗಳು. ಇಂಥಹ ಸಂದರ್ಭಗಳಲ್ಲಿ ಸಾಲದ ಅವಧಿ ಮುಗಿಯುವುದಕ್ಕೂ ಮುನ್ನ ಸಾಲವನ್ನು ಹಿಂದಕ್ಕೆ ಪಡೆಯುವ ಸೂಚನಾ ಪತ್ರವನ್ನು ಸರಿಯಾಗಿ ಮತ್ತು ಯುಕ್ತವಾಗಿ ಗ್ರಾಹಕರಿಗೆ ನೀಡುವುದು.

II ಭದ್ರತೆಯ ವಿಲೇವಾರಿ ಮಾಡದೇ ಗ್ರಾಹಕರು ಬಾಕಿಯನ್ನು ಮರುಪಾವತಿ ಮಾಡುವಂತೆ ಮಾಡಲು ಸಾಧ್ಯವಿರುವ ಮೃದುವಾದ ಅಥವಾ ಮನವೊಲಿಸುವ ಎಲ್ಲಾ ಪ್ರಯತ್ನಗಳನ್ನು ಕಂಪನಿಯು ಮಾಡುವದು. ಕಂಪನಿಯು ಗ್ರಾಹಕರಿಂದ ತನಗೆ ಬರಬೇಕಾದ ಬಾಕಿಯನ್ನು ವಸೂಲಿ ಮಾಡಲು ಯಾವುದೇ ರೀತಿಯ ಬಲಪ್ರಯೋಗದ ಅಥವಾ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಒಪ್ಪುವುದಿಲ್ಲ ಮತ್ತು ಪ್ರೋತ್ಸಾಹಿಸುವುದಿಲ್ಲ.

III) ಗ್ರಾಹಕರು ಸಾಲವನ್ನು ಪೂರ್ತಿಯಾಗಿ ತೀರಿಸಿದ ತಕ್ಷಣ ಕಂಪನಿಯು ಸಾಲದ ಭದ್ರತೆ (ಬಂಗಾರ)ಯನ್ನು ಅದು ಸಾಲವನ್ನು ಮಂಜೂರು ಮಾಡುವಾಗ ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿ ಹಿಂದಿರುಗಿಸುತ್ತದೆ. ಒಂದು ವೇಳೆ ತನ್ನ ಉದ್ಯೋಗಿಗಳ ತಪ್ಪಾದ ನಿರ್ವಹಣೆಯಿಂದ ಭದ್ರತೆ (ಬಂಗಾರ)ಗೆ ಯಾವುದೇ ಹಾನಿ ಉಂಟಾದಲ್ಲಿ ಕಂಪನಿಯು ಘಟನೆಗಳ ಆಧಾರದ ಮೇಲೆ ತನ್ನ ಸ್ವಂತ ಖರ್ಚಿನಿಂದ ಹಾನಿಯನ್ನು ಸರಿಪಡಿಸುವುದು ಅಥವಾ ಪರ್ಯಾಯವಾಗಿ ಯುಕ್ತ ನಷ್ಟ ಪರಿಹಾರವನ್ನು ಮಾಡುವದು. ಒಂದು ವೇಳೆ ಸಾಲವನ್ನು ಮಂಜೂರು ಮಾಡಿ ಭದ್ರತೆಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಮೊದಲೇ ಭದ್ರತೆಯು ಹಾನಿಗೊಳಗಾದ ಗುರುತುಗಳೇನಾದರೂ ಇದ್ದಲ್ಲಿ ಅಂತಹ ಸಂಗತಿಗಳನ್ನು ಸಂಕ್ಷಿಪ್ತವಾಗಿ ಮಂಜೂರು ಪತ್ರ (ಪಾನ್ ಟಿಕೇಟ್)ದಲ್ಲಿ ಸೇರಿಸಲಾಗುವದು.

iv) ಅಡಮಾನದ ಭದ್ರತೆಯ ಮೇಲೆ ಅಥವಾ ಯಾವುದೇ ಸಮಯದಲ್ಲಿ ಸಾಲವನ್ನು ಕೊನೆಗೊಳಿಸಿದಾಗ ಬರಬಹುದಾದಂತಹ ಹೆಚ್ಚುವರಿ ಹಣದ ಮೇಲೆ ಕಂಪನಿಯು ಕಾನೂನು ಬದ್ಧವಾಗಿರುವ ಸ್ವತ್ತಿನ ಮೇಲಿನ ಹಕ್ಕನ್ನು ಮಾತ್ರ ಚಲಾಯಿಸುತ್ತದೆ. ಒಂದು ವೇಳೆ ಗ್ರಾಹಕನು ನೇರವಾಗಿ ಅಥವಾ ಜಾಮೀನುದಾರನಾಗಿ ಬೇರೆ ಯಾವುದೇ ಬಾಕಿ ಹೊಂದಿದ್ದಲ್ಲಿ ಮಾತ್ರ ಇಂತಹ ಸ್ವತ್ತಿನ ಮೇಲಿನ ಹಕ್ಕುಗಳು ಅನ್ವಯಿಸುತ್ತದೆ ಮತ್ತು ಕಂಪನಿಯು ಗ್ರಾಹಕರಿಗೆ ಅಂತಹ ಸ್ವತ್ತಿನ ಮೇಲಿನ ಹಕ್ಕಿನ ಬಗ್ಗೆ ಸರಿಯಾದ ಸಂದೇಶವನ್ನು ಕಳುಹಿಸುವ ಷರತ್ತಿಗೊಳಪಟ್ಟಿರುತ್ತದೆ.

V ಗ್ರಾಹಕರು ಮಾಡಿದ ಹಣದ ಪಾವತಿಗಳಿಗೆ, ತಕ್ಷಣ, ಸಹಿಮಾಡಿದ ಮತ್ತು ಸ್ವಾಭಾವಿಕವಾಗಿ ಗಣಕಯಂತ್ರದಿಂದ ಬರುವಂತಹ ರಶೀದಿಯನ್ನು ಕಂಪನಿಯು ಕೊಡುವದು. ಕಂಪನಿಯು ಚೆಕ್ಕು, ಡಿಮ್ಯಾಂಡ್ ಡ್ರಾಫ್ಟ್, ವಿದ್ಯುನ್ಮಾನ ವರ್ಗಾವಣೆ ಮುಂತಾದವುಗಳ ಮುಖಾಂತರ, ನಗದಾಗಿರುವುದನ್ನು ಖಚಿತಪಡಿಸಿಕೊಂಡು ಭದ್ರತೆಯನ್ನು (ಬಂಗಾರ) ಹಿಂದಿರುತಿಸುವ ಷರತ್ತಿಗೊಳಪಟ್ಟು ಹಣದ ಪಾವತಿಯನ್ನು ಸ್ವೀಕರಿಸುವುದು.

VI) ಸಾಲದ ಮಂಜೂರಾತಿ ಪತ್ರ (ಪಾನ್ ಟಿಕೇಟ್)ದಲ್ಲಿ ಸಾಲಕ್ಕೆ ಅನ್ವಯವಾಗುವ ಎಲ್ಲಾ ನಿಬಂಧನೆಗಳು ಮತ್ತು ಷರತ್ತುಗಳು ಇದ್ದರೂ ಸಹ ಉತ್ತಮ ಪ್ರಯತ್ನದ ಸಲುವಾಗಿ ಬಡ್ಡಿ, ಅಸಲಿನ ಪಾವತಿಯ ಕೊನೆಯ ದಿನಾಂಕ, ಮುಂತಾದವುಗಳ ಬಗ್ಗೆ ಸಲಹೆ, ಜ್ಞಾಪನ ಮುಂತಾದವುಗಳನ್ನು ಪತ್ರ, ಕೋರಿಯರ್, ದೂರವಾಣಿ, ಎಸ್‌ಎಂಎಸ್ ಮುಂತಾದವುಗಳ ಮೂಲಕ ಕಂಪನಿಯು ತಿಳಿಸುವುದು.

VII) ಸಾಲವು ಚಾಲ್ತಿಯಲ್ಲಿರುವ ಯಾವುದೇ ಸಮಯದಲ್ಲಿ ಅಥವಾ ಅಂತ್ಯಗೊಳಿಸಿದ ತಕ್ಷಣ ಗ್ರಾಹಕರಿಗೆ ಅಥವಾ ಅವನಿಂದ ಸರಿಯಾಗಿ ಅಧಿಕಾರ ಪಡೆದ ಪ್ರತಿನಿಧಿಗೆ ಬೇಡಿಕೆಯ ಮೇರೆಗೆ, ಸಾಲದ ಖಾತೆಯ ಒಂದು ಲಿಖಿತ ಹೇಳಿಕೆಯನ್ನು ಕಂಪನಿಯು ಕೊಡುವುದು. ಆದರೆ ಅಂತಹ ಬೇಡಿಕೆಯು ಸಾಲದ ಖಾತೆಯು ಮುಕ್ತಾಯವಾದ 30 ದಿನಗಳ ನಂತರ ಮಾಡಿದ್ದಾದರೆ, ಕಂಪನಿಯು ತನ್ನ ವಿವೇಚನೆಯಿಂದ ಲಿಖಿತ ಹೇಳಿಕೆಯನ್ನು ಒದಗಿಸುವುದಕ್ಕೋಸ್ಕರ ಯುಕ್ತ ಪ್ರಕ್ರಿಯಾ ಶುಲ್ಕಗಳನ್ನು ಗ್ರಾಹಕರಿಗೆ ವಿಧಿಸಬಹುದು.

viii) ಕಂಪನಿಯು ಕೊನೆಯ ಹಂತವಾಗಿ ಭದ್ರತೆಯ (ಬಂಗಾರ) ವಿಲೇವಾರಿಯನ್ನು ಗ್ರಾಹಕರಿಗೆ ಬಾಕಿ ಮರುಪಾವತಿಗೆ ಸಾಕಷ್ಟು ಸಮಯದ ಮತ್ತು ಸರಿಯಾದ ನೋಟಿಸ್ ಜಾರಿಯಾದ ನಂತರವೇ ಮಾಡುವುದು. ಅಂತಹ ನೋಟಿಸ್‌ಗಳು ಸಾಲದ ಮಂಜೂರಾತಿ ಪತ್ರ (ಪಾನ್ ಟಿಕೇಟ್)ದಲ್ಲಿರುವ ನಿಬಂಧನೆಗಳ ಪ್ರಕಾರ ಮತ್ತು ಅನ್ವಯವಾಗುವ ಕಾನೂನುಗಳ ಮತ್ತು ನಿಯಂತ್ರಕರ ನಿರ್ದೇಶನಗಳ ಪ್ರಕಾರ ಇರುತ್ತವೆ. ಗ್ರಾಹಕರಿಗೆ ಸಾಲದ ಖಾತೆಯನ್ನು ಬಡ್ಡಿ ಹಾಗೂ ಇತರೆ ಶುಲ್ಕಗಳೊಂದಿಗೆ ಮುಕ್ತಾಯಗೊಳಿಸಲು ಕಂಪನಿಯು ಕಳಿಸುವಂತಹ ಪತ್ರ ವ್ಯವಹಾರಗಳಿಗೆ ಗ್ರಾಹಕರು ಸರಿಯಾಗಿ ಸ್ಪಂದಿಸದಿದ್ದಲ್ಲಿ ಭದ್ರತೆಯ (ಬಂಗಾರ) ವಿಲೇವಾರಿಯನ್ನು ಸಾರ್ವಜನಿಕ ಹರಾಜಿನ ಮೂಲಕ ಮಾಡಲಾಗುವುದು.

ix) ಸಾಲದ ಅರ್ಜಿ ಮತ್ತು ಸಾಲದ ಮಂಜೂರಾತಿ ಪತ್ರ (ಪಾನ್ ಟಿಕೇಟ್)ದಲ್ಲಿ ಕಂಪನಿಗೆ ಕೊಟ್ಟಂತಹ ಹಕ್ಕುಗಳ ಆಧಾರದ ಮೇಲೆ ಕಂಪನಿಯು ಸಾಲದ ಸ್ವಾಭಾವಿಕ ಅವಧಿಗೂ ಮುನ್ನ ಭದ್ರತೆಯನ್ನು ವಿಲೇವಾರಿ ಮಾಡಲು ಪ್ರಸ್ತಾಪಿಸಿದಲ್ಲಿ, ಬಾಕಿಯನ್ನು ವಸೂಲಿ ಮಾಡಲು ಅಂತಹ ಕ್ರಮ ಜರುಗಿಸುವುದಕ್ಕೂ ಮುನ್ನ ಗ್ರಾಹಕರಿಗೆ ಸಾಕಷ್ಟು ಸಮಯದ ಮತ್ತು ಸರಿಯಾದ ನೋಟೀಸನ್ನು ಜಾರಿ ಮಾಡುವುದು.

X ಗ್ರಾಹಕರು ಎಲ್ಲಾ ಬಾಕಿಗಳನ್ನು ಪೂರ್ತಿಯಾಗಿ ಕೊನೆಗೊಳಿಸಿದ ತಕ್ಷಣ, ಭದ್ರತೆಯನ್ನು ಹಿಂದಕ್ಕೆ ಪಡೆದುಕೊಳ್ಳಬೇಕಾಗಿ ಕಂಪನಿಯು ಇಷ್ಟಪಡುತ್ತದೆ ಮತ್ತು ಪ್ರೋತ್ಸಾಹಿಸುತ್ತದೆ. ಆದರೆ ಗ್ರಾಹಕರು ಸಾಲದ ಖಾತೆಯನ್ನು ಕೊನೆಗೊಳಿಸಿದ ನಂತರವೂ, ಕಂಪನಿಯ ಹೊಣೆಗಾರಿಕೆ ಇಲ್ಲದಿರುವಾಗ, ಭದ್ರತೆ ವಿಲೇವಾರಿಯನ್ನು ತೆಗೆದುಕೊಳ್ಳಲು ಅಶಕ್ತರಾದಲ್ಲಿ, ಯುಕ್ತವಾದ ಸುರಕ್ಷತಾ ಶುಲ್ಕಗಳನ್ನು ಕೊಡಬೇಕಾಗುವದು. ಅದರ ಬಗ್ಗೆ ಗ್ರಾಹಕರಿಗೆ ತಿಳಿಹೇಳಲಾಗುವುದು ಅಥವಾ ಶಾಖೆಯ ಆವರಣದಲ್ಲಿ ಹಾಗೂ ಕಂಪನಿಯ ಅಂತರ್ಜಾಲ ತಾಣದಲ್ಲಿ ಪ್ರದರ್ಶಿಸಲಾಗುವುದು.

XI) ಸಾಲದ ನಿಬಂಧನೆಗಳು ಮತ್ತು ಷರತ್ತುಗಳಲ್ಲಿ ನಮೂದಿಸಿದ ಉದ್ದೇಶಗಳಿಗಾಗಿ ಅಥವಾ ಸಾಲಗಾರನು ವ್ಯವಹಾರದ ಸಮಯದಲ್ಲಿ ಮಾಡಿದಂತಹ ಅಪೂರ್ಣ ಅಥವಾ ಸುಳ್ಳು ಮಾಹಿತಿಗಳಿಂದಾಗಿ ಅಡ್ಡಿ ಮಾಡಲೇಬೇಕಾದ ಪರಿಸ್ಥಿತಿಗಳನ್ನು ಹೊರತುಪಡಿಸಿ ಕಂಪನಿಯು ಗ್ರಾಹಕರ ಕಾರ್ಯಗಳಲ್ಲಿ ಅಡ್ಡಿಯಾಗುವುದಿಲ್ಲ.

### IV) **ಗ್ರಾಹಕರ ಸೇವೆ ಮತ್ತು ದೂರುಗಳ ನಿವಾರಣೆ**

i) ಕಂಪನಿಯು ಗ್ರಾಹಕರ ದೂರುಗಳನ್ನು/ಕುಂದು ಕೊರತೆಗಳನ್ನು ತಡೆಗಟ್ಟಲು ಮತ್ತು ಕಡಿಮೆಗೊಳಿಸಲು ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಅಳವಡಿಸಿಕೊಳ್ಳುತ್ತದೆ.

II ಅಡಮಾನ ಮಾಡಿದ ಭದ್ರತೆಯ ವಿಲೇವಾರಿಯನ್ನು ಸಾಲವನ್ನು ವಿತರಣೆ ಮಾಡಿದ ಶಾಖೆಯಲ್ಲಿಯೇ ಮಾಡುವ ಷರತ್ತಿಗೊಳಪಟ್ಟು ಗ್ರಾಹಕರು ಕಂಪನಿಯ ಯಾವುದೇ ಶಾಖೆಯಲ್ಲಿ ಪೂರ್ತಿ ಅಥವಾ ಭಾಗಶಃ ಬಾಕಿಯನ್ನು ಪಾವತಿಸಲು ಕಂಪನಿಯು ಅವಕಾಶ ಮಾಡಿಕೊಡುತ್ತದೆ.

III) ಕಂಪನಿಯು ಪರಿಣಾಮಕಾರಿಯಾದ ಗ್ರಾಹಕರ ದೂರುಗಳ ಪರಿಹಾರ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರುತ್ತದೆ. ಅದರ ವಿವರಗಳನ್ನು ಅಂತರ್ಜಾಲ ತಾಣದಲ್ಲಿ ಮತ್ತು ಎಲ್ಲಾ ಶಾಖೆಗಳಲ್ಲಿ ಪ್ರದರ್ಶಿಸಲಾಗುವುದು. ಈ ವ್ಯವಸ್ಥೆಯು ದೂರುಗಳನ್ನು ನೊಂದಾಯಿಸಬಹುದಾದ ಅಧಿಕಾರಿಗಳ ಹೆಸರು ಮತ್ತು ಹುದ್ದೆ, ಅವರ ಅಂಚೆ ವಿಳಾಸ/ದೂರವಾಣಿ ಸಂಖ್ಯೆ/ಇ-ಮೇಲ್ ವಿಳಾಸ, ಹೆಚ್ಚುವರಿಯಾಗುವ ವ್ಯವಸ್ಥೆ, ದೂರುಗಳ ಸ್ವೀಕಾರಕ್ಕೆ ಇರುವ ಕಾಲಮಿತಿ, ದೂರುಗಳ ನಿರ್ವಹಣೆಯ ಕಾಲಮಿತಿ ಮುಂತಾದವುಗಳನ್ನು ನಿರ್ದಿಷ್ಟವಾಗಿ ತಿಳಿಸುವುದು.

IV) ಕಂಪನಿಯ ಉದ್ಯೋಗಿಗಳು ಗ್ರಾಹಕರೊಡನೆ ಸ್ನೇಹಭಾವದಿಂದ ಇರುವುದನ್ನು ಮತ್ತು ಒರಟಾದ, ಅಸಮಂಜಸ ಅಥವಾ ನೈತಿಕವಲ್ಲದ ವರ್ತನೆಗಳಿಗೆ ಹೋಗದಂತೆ ಮಾಡುವುದನ್ನು ಖಚಿತಪಡಿಸಿಕೊಳ್ಳಲು ಒಂದು ಪರಿಣಾಮಕಾರಿಯಾದ ತರಬೇತಿ ವ್ಯವಸ್ಥೆಯನ್ನು ಮಾಡುವುದು.

V ವಿವಿಧ ವ್ಯವಹಾರಗಳನ್ನು ಮುಂದುವರಿಸಲು ಮತ್ತು ಪೂರ್ತಿಗೊಳಿಸಲು ಇರುವ ಕಾಲಾವಧಿಗಳನ್ನು ಲೆಕ್ಕ ಹಾಕಲು ಮತ್ತು ಪ್ರದರ್ಶಿಸಲು ಕಂಪನಿಯು ಪ್ರಯತ್ನಿಸುವುದು.

VI) ಗ್ರಾಹಕರು, ವಿಶೇಷವಾಗಿ ಬಡ ಮತ್ತು ಸೌಕರ್ಯವಿಲ್ಲದ ವರ್ಗದವರು, ಎದುರಿಸಿದ ತೊಂದರೆಗಳಿಗೆ ಕಂಪನಿಯು ಅನುಕಂಪದಿಂದ ವ್ಯವಹರಿಸುತ್ತದೆ.

### IV) **ಇತರೆ**

i) ಕಂಪನಿಯು ಆಯಾ ಶಾಖೆಗಳಲ್ಲಿ ದೈನಂದಿನ ವ್ಯವಹಾರದ ವೇಳೆಯನ್ನು, ರಜಾದಿನಗಳ ಪಟ್ಟಿಯನ್ನು ಪ್ರದರ್ಶಿಸುವುದು. ಯಾವುದಾದರೂ ಬದಲಾವಣೆಗಳಿದ್ದಲ್ಲಿ ಅವುಗಳನ್ನು ಶಾಖೆಯಲ್ಲಿ ಪ್ರದರ್ಶಿಸಿ ಅಥವಾ ಮಾಧ್ಯಮಗಳ ಮುಖಾಂತರ ತಿಳಿಯಪಡಿಸುವುದು.

II ಗ್ರಾಹಕರ ವೈಯುಕ್ತಿಕ ಮಾಹಿತಿಯನ್ನು ಅನಧೀಕೃತ ವ್ಯಕ್ತಿಗಳೊಂದಿಗೆ ಅಥವಾ ಮಧ್ಯವರ್ತಿಗಳೊಂದಿಗೆ ಅಥವಾ ಮೂರನೇ ವ್ಯಕ್ತಿಗಳೊಂದಿಗೆ ಕಂಪನಿಯು ಹಂಚಿಕೊಳ್ಳುವುದಿಲ್ಲ. ಆದರೆ, ಕಾನೂನನ್ನು ಅಥವಾ ನಿಯಂತ್ರಕರ ಅವಶ್ಯಕತೆಗಳನ್ನು, ಯಾವುದಾದರೂ ಇದ್ದಲ್ಲಿ, ಗೌರವಿಸುವುದಕ್ಕಾಗಿ ಮತ್ತು ಪಾಲಿಸುವುದಕ್ಕಾಗಿ ಕಂಪನಿಯು ಬದ್ಧವಾಗಿದ್ದು ಈ ವಿಷಯದಲ್ಲಿ ಗ್ರಾಹಕರಿಗೆ ಸೂಚನೆ ನೀಡದೇ ಅಂತಹ ಮಾಹಿತಿಯನ್ನು ನೀಡಲು ಕಂಪನಿಯು ಬದ್ಧವಾಗಿರುತ್ತದೆ.